## ನವನವೀನ ‘ಚರಣ’

‘ಬೀಚಿ ಗೀಚಿದ ರಹಸ್ಯ’– ಇದು ಕನ್ನಡದ ಖ್ಯಾತ ಲೇಖಕ ಬೀಚಿ ಅವರ ಕಾದಂಬರಿಯನ್ನು ಆಧರಿಸಿ ರೂಪುಗೊಳ್ಳುತ್ತಿರುವ ಸಿನಿಮಾದ ಹೆಸರು. ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸುತ್ತಿರುವ ಎಂ.ಡಿ. ಕೌಶಿಕ್ ಚಿತ್ರ ನಿರ್ಮಾಣದ ಹೊಣೆಯನ್ನೂ ಹೊತ್ತುಕೊಂಡಿದ್ದಾರೆ. ಮುಖ್ಯಪಾತ್ರವೊಂದರಲ್ಲಿ ಅವರು ನಟಿಸುತ್ತಿದ್ದಾರೆ ಕೂಡ. ರಣಧೀರ್ ಮತ್ತು ಚಿತ್ರಾ ಎನ್ನುವ ಹೊಸ ಜೋಡಿಯನ್ನು ಪರಿಚಯಿಸುತ್ತಿರುವ ಈ ಚಿತ್ರದ ತಾರಾಗಣದಲ್ಲಿ ಎದ್ದುಕಾಣುವ ಹೆಸರು ಚರಣ್ ರಾಜ್ ಅವರದು. ಬಹುದಿನಗಳ ನಂತರ ಚರಣ್ ಕನ್ನಡ ಚಿತ್ರವೊಂದರಲ್ಲಿ ನಟಿಸುತ್ತಿದ್ದಾರೆ.

ಚರಣ್ ರಾಜ್ ಹಾಗೂ ಕೌಶಿಕ್ ದೀರ್ಘಕಾಲದ ಗೆಳೆಯರು. ಜೋಸೈಮನ್ ಅವರಿಗೆ ಸಹಾಯಕರಾಗಿ ಕೌಶಿಕ್ ಕೆಲಸ ಮಾಡುತ್ತಿದ್ದ ದಿನಗಳಿಂದಲೂ ಇಬ್ಬರಿಗೂ ಸ್ನೇಹ. ಈ ಸಖ್ಯದ ಕಾರಣದಿಂದಲೇ ಕೌಶಿಕ್, ತಮ್ಮ ‘ಬೀಚಿ ಗೀಚಿದ ರಹಸ್ಯ’ ಚಿತ್ರದ ನಟಿಸಲು ಗೆಳೆಯನ್ನು ಕರೆದಿದ್ದಾರೆ. ಸ್ನೆಹದ ಕರೆಗೆ ಚರಣ್ ಕೂಡ ಓಗೊಟ್ಟಿದ್ದಾರೆ.

ಚಿತ್ರದಲ್ಲಿ ಚರಣ್‌ರಾಜ್ ಅವರದು ಪೊಲೀಸ್ ಅಧಿಕಾರಿಯ ಪಾತ್ರ. ಕೌಶಿಕ್ ಅವರು ವಿವರಿಸಿರುವ ಪಾತ್ರ ಅವರಿಗೆ ಇಷ್ಟವಾಗಿದೆ. ಪ್ರಸ್ತುತ ತಮ್ಮ ಮಗನನ್ನು ನಟನಾಗಿ ಕನ್ನಡ ಚಿತ್ರರಂಗಕ್ಕೆ ಪರಿಚಯಿಸುವ ಉತ್ಸಾಹದಲ್ಲಿರುವ ಅವರು, ಗೆಳೆತನದ ಕಾರಣದಿಂದಾಗಿ ತಾವೇ ಬಣ್ಣ ಹಚ್ಚಿಕೊಂಡಿದ್ದಾರೆ. ಅಂದಹಾಗೆ, ಈ ಮೊದಲು ‘ಒಡೆದ ಹಾಲು’ ಎನ್ನುವ ಕೌಶಿಕ್‌ರ ಚಿತ್ರದಲ್ಲಿ ಕೂಡ ಚರಣ್‌ರಾಜ್ ನಟಿಸಿದ್ದರು.





## ‘ಸನ್ನಿ’ ನಂ. 2

ಕಳೆದ ವಾರ ಬೆಂಗಳೂರಿನಲ್ಲಿ ಮಳೆ–ಗಾಳಿಯ ತಣ್ಣನೆಯ ಪರಿಸರ. ಈ ತಂಪಿಗೆ ಜ್ವರವೇರಿಸುವಂತೆ ಗಾಂಧಿನಗರದಲ್ಲಿ ಕಾಣಿಸಿಕೊಂಡ ಸನ್ನಿ ಲಿಯೋನ್ ‘ಲವ್ ಯು ಆಲಿಯಾ’ ಚಿತ್ರದ ಗೀತೆಯೊಂದಕ್ಕೆ ಹೆಜ್ಜೆ ಹಾಕಿದರು. ಪ್ರೇಮ್ ಅವರ ‘ಡಿಕೆ’ ಚಿತ್ರದಲ್ಲಿ ಶೇಷಮ್ಮನಾಗಿ ಕುಣಿದಿದ್ದ ಸನ್ನಿ, ಇಂದ್ರಜಿತ್ ಲಂಕೇಶ್ ನಿರ್ದೇಶನದ ‘ಲವ್ ಯು ಆಲಿಯಾ’ ಚಿತ್ರದಲ್ಲಿ ಕಾಮಾಕ್ಷಿ!

ಎರಡನೇ ಕನ್ನಡ ಸಿನಿಮಾದ ವೇಳೆಗೆ ಸನ್ನಿ ಅವರಿಗೆ ಬೆಂಗಳೂರು ಹೆಚ್ಚು ಆಪ್ತ ಎನ್ನಿಸುತ್ತಿರುವಂತಿದೆ. ಮುಂಬೈ ನಗರಕ್ಕಿಂತಲೂ ಹೆಚ್ಚು ಸ್ವಚ್ಛವಾಗಿರುವ ಹಾಗೂ ಶಾಂತ ಪರಿಸರ ಇರುವ ನಗರದಂತೆ ಬೆಂಗಳೂರು ಅವರಿಗೆ ಕಾಣಿಸಿದೆ. ಇಲ್ಲಿನ ಜನ ವಿಪರೀತ ಚಾಲಾಕಿಗಳಂತೆ ತೋರಿಸಿಕೊಳ್ಳುವುದಿಲ್ಲ ಎಂದೂ ಅವರಿಗನ್ನಿಸಿದೆ. ಬೆಂಗಳೂರು ಅಷ್ಟೇ ಏಕೆ, ಇಡೀ ದಕ್ಷಿಣ ಭಾರತ ಚಿತ್ರರಂಗವೇ ಅವರಿಗೆ ಹಿತಾನುಭವ ಎನ್ನಿಸಿದೆಯಂತೆ.

ಸಿನಿಮಾದ ವಿಷಯಕ್ಕೆ ಬಂದರೆ ಕಾಮಾಕ್ಷಿಯಾಗಿ ನಾಲ್ಕು ದಿನ ಕುಣಿದಿರುವುದು ಕೂಡ ಸನ್ನಿ ಅವರಿಗೆ ಖುಷಿ ಕೊಟ್ಟಿದೆ. ಈ ವಿಶೇಷ ಹಾಡಿನ ಚಿತ್ರೀಕರಣಕ್ಕೆ ನಿರ್ದೇಶಕ ಇಂದ್ರಜಿತ್ ಲಂಕೇಶ್ ವಿಶೇಷ ಮುತುವರ್ಜಿಯನ್ನೇ ವಹಿಸಿದ್ದರು. ಕಿರುತೆರೆಯ ಗೆಳೆಯ ಸೃಜನ್ ಲೋಕೇಶ್ ಅವರನ್ನು ಕಾಮಾಕ್ಷಿಗೆ ಜೊತೆಗಾರನಾಗಿಸಿದ್ದ ಇಂದ್ರಜಿತ್, ಗೀತೆಯ ಚಿತ್ರೀಕರಣಕ್ಕಾಗಿ ವಿಂಟೇಜ್ ಕಾರುಗಳನ್ನು ಬಳಸಿಕೊಂಡು ದೃಶ್ಯ ಶ್ರೀಮಂತಿಕೆ ಹೆಚ್ಚಿಸುವ ಪ್ರಯತ್ನ ಮಾಡಿದ್ದಾರೆ. ತಮ್ಮ ವೃತ್ತಿಜೀವನದ ಅತ್ಯಂದ ಸ್ಮರಣೀಯ ಚಿತ್ರ ಇದೆನ್ನುವುದು ಇಂದ್ರಜಿತ್ ಅನಿಸಿಕೆ.

ಸಿನಿಮಾದ ಆಚೆಗೆ ಸನ್ನಿ ಲಿಯೋನ್ ಹೆಚ್ಚು ಮಾತನಾಡಿದ್ದು ಸಾಮಾಜಿಕ ಕಾಳಜಿಯ ಬಗ್ಗೆ. ‘ಸಿನಿಮಾಗಳಲ್ಲಿ ಗ್ಲಾಮರ್ ಪ್ರದರ್ಶನ ತಪ್ಪೇನಲ್ಲ. ಆದರೆ, ಸಾರ್ವಜನಿಕವಾಗಿ ಕಾಣಿಸಿಕೊಳ್ಳುವಾಗ ಹೆಚ್ಚು ಜವಾಬ್ದಾರಿಯಿಂದ ವರ್ತಿಸಬೇಕು’ ಎನ್ನುವುದು ಅವರ ಮಾತಿನ ಸಾರ. ಬೆಕ್ಕು–ನಾಯಿ ಸೇರಿದಂತೆ ತಮ್ಮ ಪ್ರಾಣಿಪ್ರೀತಿಯ ಬಗ್ಗೆಯೂ ಹೇಳಿಕೊಂಡ ಅವರು ಪ್ರಾಣಿ ದಯಾ ಸಂಘಟನೆ ‘ಪೇಟಾ’ದ ರಾಯಭಾರಿಯೂ ಹೌದು.

■ ರಘು